**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.40-2024

ದೋ.ಸಾ. 2
ಫ್ರಾ.ಸಾ. 2
ಪ್ರ.ವ.ಬೊ.ದಿನಾಂಕ. 07-01-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಡಾ.ವಿವೇಕ್ |
| ತಂದೆ / ಗಂಡನ ಹೆಸರು | - | ಪ್ರಕಾಶ |
| ವಯಸ್ಸು | - | 37 |
| ಉದ್ಯೋಗ | - | ವೈದ್ಯರು |
| ವಾಸ ಸ್ಥಳ | - | ಶಿವಮೊಗ್ಗ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಫ್ರಾ.ಸಾ.1 ನನ್ನ ಹೆಂಡತಿ. ಚಾ.ಸಾ.5 ಮತ್ತು 6 ನನ್ನ ತಂದೆ ಮತ್ತು ತಾಯಿ. ನನಗೆ ಚಾ.ಸಾ.7 ಮತ್ತು 8 ರವರ ಪರಿಚಯ ಇರುತ್ತದೆ. ಅದೇ ರೀತಿ ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತನ ಪರಿಚಯ ಇದ್ದು, ಆತ ನನಗೆ ಅಣ್ಣನಾಗಬೇಕು. ನಾನು ಮತ್ತು ನನ್ನ ಹೆಂಡತಿ ಫ್ರಾ.ಸಾ.1 ರವರು ಈ ಮೊದಲು ದಾವಣಗೆರೆಯ ಕಾಲೇಜ್ ಆಪ್ ಮೆಡಿಕಲ್ ಸೈನ್ಸ್ ನಲ್ಲಿ ರೀಡರ್ ಆಗಿ ಕೆಲಸ ಮಾಡುತ್ತಿದ್ದೆವು. ಆ ರೀತಿ ಕೆಲಸ ಮಾಡುವಾಗ ನಾನು ಮತ್ತು ಆಕೆ ನನ್ನ ತಂದೆ, ತಾಯಿ ಹಾಗೂ ಆರೋಪಿನ ಜೊತೆ ವಾಸವಾಗಿದ್ದೆವು.

ಆರೋಪಿತನು ನನಗಾಗಲಿ, ನನ್ನ ಹೆಂಡತಿಗಾಗಲಿ ಯಾವುದೇ ತೊಂದರೆಯನ್ನು ನೀಡಿದ್ದು ಇರುವುದಿಲ್ಲ. ಆತ ನಮ್ಮನ್ನು ಕೊಲೆ ಮಾಡುವ ಉದ್ದೇಶದಿಂದ ಮಚ್ಚಿನಿಂದ ನಮ್ಮ ಮೇಲೆ ಹಲ್ಲೆ ಮಾಡಿದ್ದಾಗಲಿ, ಕೈಗಳಿಂದ ಹಲ್ಲೆ ಮಾಡಿದ್ದಾಗಲಿ, ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿದ್ದಾಗಲಿ ಹಾಗೂ ನನ್ನ ಹೆಂಡತಿಯ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಾಗಲಿ ಇರುವುದಿಲ್ಲ. ಈ ಕುರಿತಾಗಿ ನಾನು ಮತ್ತು ನನ್ನ ಹೆಂಡತಿ ಚಿಕಿತ್ಸೆಯನ್ನು ಪಡೆದುಕೊಂಡಿದು ಇರುವುದಿಲ್ಲ. ನನ್ನ ಹೆಂಡತಿ ಫ್ರಾ.ಸಾ.1 ರವರು ಆರೋಪಿತನ ವಿರುದ್ಧ ದೂರು ದಾಖಲಿಸಿರುವ ವಿಚಾರ ನನಗೆ ತಿಳಿದಿರುವುದಿಲ್ಲ. ನನಗೆ ಈಗ ತೋರಿಸುತ್ತಿರುವ ಮು.ಮಾ.1 ರಿಂದ 4 ರ ವಿಚಾರ ತಿಳಿದಿರುವುದಿಲ್ಲ. ನಿ.ಪಿ.3 ರಿಂದ 7 ರಲ್ಲಿ ಕಂಡುಬರುತ್ತಿರುವ ಮನೆಯು ನಮ್ಮ ಮನೆಯಾಗಿರುತ್ತದೆ. ನನ್ನನ್ನು ಈ ಪ್ರಕರಣದ ಕುರಿತಾಗಿ ಪೋಲೀಸರು ವಿಚಾರಣೆ ಮಾಡಿರುವುದಿಲ್ಲ. ನಾನು ಆ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಆರೋಪಿತನು ನಮ್ಮ ಮನೆಯಲ್ಲಿ ವಾಸವಿರುವಾಗ ಮಾನಸಿಕವಾಗಿ ಆರೋಗ್ಯದಿಂದ ಇದ್ದನು ಎಂದರೆ ಸರಿ. ಆತ ದಿಃ 02-01-2024 ರಂದು ಮಧ್ಯಾಹ್ನ 1-45 ಗಂಟೆ ಸಮಯದಲ್ಲಿ ನನ್ನ ಹೆಂಡತಿಯು ಟಿವಿ ಹಚ್ಚಿಕೊಂಡು

ಮಗುವಿಗೆ ಊಟ ಮಾಡಿಸುತ್ತಿರುವಾಗ ಅಲ್ಲಿಗೆ ಬಂದು ಟಿವಿ ಆಫ್ ಮಾಡಿದ್ದು, ಆಗ ನನ್ನ ಹೆಂಡತಿಯು ಆತನಲ್ಲಿ ವಿಚಾರಿಸಿದಾಗ ಆರೋಪಿಯು ಗಲಾಟೆ ಮಾಡಿ ನನ್ನ ಹೆಂಡತಿಗೆ ಮೈಕೈಗಳಿಗೆ ಕೈ ಮುಷ್ಟಿಯಿಂದ ಹಲ್ಲೆ ಮಾಡಿದ್ದಲ್ಲದೇ ಮು.ಮಾ.1 ನ್ನು ತೆಗೆದುಕೊಂಡು ಬಂದು ಕೊಲೆ ಮಾಡುವುದಾಗಿ ಹೇಳುತ್ತ ನನ್ನ ಹೆಂಡತಿಯ ಕಡೆ ಮಚ್ಚು ಬೀಸಿ ಅವಳ ಬಲಪಕ್ಕೆಗೆ ಗಾಯಮಾಡಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪುನಃ ಆರೋಪಿಯು ಮಚ್ಚಿನಿಂದ ನನ್ನ ಹೆಂಡತಿಯ ತಲೆಗೆ ಹೊಡೆಯಲು ಹೋದಾಗ ನಾನು ಮಚ್ಚನ್ನು ಬಿಗಿಯಾಗಿ ಹಿಡಿದುಕೊಂಡಿದ್ದು, ಆ ಕಾರಣ ನನ್ನ ಬಲಗೈಗೆ ಕೂಡ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಅಲ್ಲದೇ ಆರೋಪಿಯು ಆ ಸಮಯದಲ್ಲಿ ನಮಗೆ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿದ್ದಲ್ಲದೇ, ನನ್ನ ಹೆಂಡತಿಯ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿರುತ್ತಾನೆ ಎಂದರೆ ಸರಿಯಲ್ಲ. ಈ ಕುರಿತಾಗಿ ನಾನು ಮತ್ತು ನನ್ನ ಹೆಂಡತಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ನನ್ನ ಹೆಂಡತಿಯು ಆರೋಪಿತರ ವಿರುದ್ಧ ದೂರು ಸಲ್ಲಿಸಿದ್ದು, ನಂತರ ತನಿಖೆಯ ಸಮಯದಲ್ಲಿ ಪೋಲೀಸರು ನನ್ನ ಮನೆಗೆ ಬಂದು ನನ್ನ ಹೆಂಡತಿಯ ರಕ್ತ ತಾಗಿದ ಮು.ಮಾ.3 ರಿಂದ 4 ಬಟ್ಟೆಗಳನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲದೇ ನನ್ನನ್ನು ಆ ಸಮಯದಲ್ಲಿ ವಿಚಾರಿಸಿದ್ದು, ನಾನು ಈಗ ಓದಿ ಹೇಳಿದಂತೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.9 ಎಂದು ಗುರುತಿಸಲಾಯಿತು. ಆರೋಪಿಯು ನನ್ನ ಅಣ್ಣನಾಗಿರುವ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2026.01.08 14:34:19 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

SC. No.40-2024
ಪಿಡಬ್ಲ್ಯೂ-1
ದಿಃ 07-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ನನ್ನ ಮನೆಯಿಂದ ಚಿಗಟೇರಿ ಜಿಲ್ಲಾ ಆಸ್ಪತ್ರೆಯು ಅರ್ಧ ಕಿಮೀ ಅಂತರದಲ್ಲಿ ಇರುತ್ತದೆ ಎಂದರೆ ಸರಿ. ಅದೇ ರೀತಿ ಬಡಾವಣಾ ಪೊಲೀಸ್ ಠಾಣೆಯು ಕೂಡ ಅರ್ಧ ಕಿಮೀ ಅಂತರದಲ್ಲಿ ಇರುತ್ತದೆ ಎಂದರೆ ಸರಿ. ನಿ.ಪಿ.1 ದೂರನ್ನು ಸಲ್ಲಿಸಲು ಆದ ವಿಳಂಬವನ್ನು ನಾನು ಹೇಳಿಕೊಂಡಿರುವುದಿಲ್ಲ ಎಂದರೆ ಸರಿ. ನನ್ನ ಮನೆಯ ಎದುರು ಯಾವುದೇ ಗಾರ್ಡನ್ ಇರುವುದಿಲ್ಲ ಎಂದರೆ ಸರಿ. ನಾನು ಮದುವೆಯಾಗಿ ಬರುವ ಪೂರ್ವದಲ್ಲಿಯೇ ಆರೋಪಿಯು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದ ಎಂದರೆ ಸರಿ. ಅದೇ ರೀತಿ ನಮ್ಮ ಮನೆಗೆ ಹೊಂದಿಕೊಂಡು ಯಾವುದೇ ಗಾರ್ಡನ್ ಇರುವುದಿಲ್ಲ ಎಂದರೆ ಸರಿ.

ಚಾ.ಸಾ.3 ಮತ್ತು 4 ರವರು ನನ್ನ ಆಸ್ಪತ್ರೆಯ ರೋಗಿಗಳು ಎಂದರೆ ಸರಿ. ನಮ್ಮ ಮನೆಯಲ್ಲಿ ಸ್ವಲ್ಪ ಆರೋಪಿಯಿಂದ ಕಿರಿಕಿರಿಯಾದ ಕಾರಣ ನಾನು ಠಾಣೆಗೆ ಹೋಗಿ ಆರೋಪಿಯನ್ನು ಕರೆಯಿಸಿ ವಿಚಾರಿಸುವಂತೆ ಕೇಳಿಕೊಂಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಪೋಲೀಸರು ಒಂದು ದಾಖಲೆಯನ್ನು ಬೆರಳಚ್ಚು ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನನಗೆ ಕನ್ನಡ ಓದಲು ಮತ್ತು ಬರೆಯಲು ಬಾರದ ಕಾರಣ ಸದರಿ ದಾಖಲೆಯಲ್ಲಿ ಏನು ಬರೆದಿತ್ತು ಎಂದು ನನಗೆ ತಿಳಿದು ಬಂದಿರಲಿಲ್ಲ ಎಂದರೆ ಸರಿ. ಮು.ಮಾ.1 ರಿಂದ 4 ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಗುರುತಿಸಲು ಸಾಧ್ಯವಿಲ್ಲ ಎಂದರೆ ಸರಿ. ನನಗೆ ಯಾವುದೇ ರೀತಿಯ ಗಾಯಗಳು ಆರೋಪಿಯಿಂದ ಆದದ್ದು ಇರಲಿಲ್ಲ ಎಂದರೆ ಸರಿ.

ನಂತರ ಪೋಲೀಸರು ನಮ್ಮ ಮನೆಯ ಬಳಿ ಬಂದು ಕೆಲವು ದಾಖಲೆಗಳಿಗೆ ಸಹಿ ಪಡೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಸದರಿ ದಾಖಲೆ ನಿ.ಪಿ.2 ನ್ನು ಕನ್ನಡದಲ್ಲಿ ಬರೆದಿರುವ ಕಾರಣ ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ನನಗೆ ನೆನಪು ಇದ್ದ ಪ್ರಕಾರ ನಾನು ಯಾವುದೇ ವಸ್ತುಗಳನ್ನು ಪೋಲೀಸರಿಗೆ ನೀಡಿರುವುದಿಲ್ಲ ಎಂದರೆ ಸರಿ. ನಾನು ನ್ಯಾಯಾಧೀಶರ ಎದುರು ಪೋಲೀಸರು ಯಾವ ರೀತಿಯಾಗಿ ಹೇಳಬೇಕು ಎಂದು ಹೇಳಿಕೊಟ್ಟಿದ್ದರೋ ಅದೇ ಪ್ರಕಾರವಾಗಿ ಹೇಳಿರುತ್ತೇನೆ ಎಂದರೆ ಸರಿ. ಅದೇ ರೀತಿ ನನ್ನ ಗಂಡ ಚಾ.ಸಾ.2 ರವರಿಗೂ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದರೆ ಸರಿ.

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.**

ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಾಗ ನಿಜ ಹೇಳಬೇಕು ಎಂದು ನನಗೆ ತಿಳಿದಿರುತ್ತದೆ. ನಾನು ಈ ಮೊದಲು ಬಂದು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಯಾವುದಾದರೂ ದಾಖಲೆಗಳಿಗೆ ಸಹಿ ಮಾಡುವ ಮುನ್ನ ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ತಿಳಿದು ನಾನು ಸಹಿ ಮಾಡುತ್ತೇನೆ ಎಂದರೆ ಸರಿ. ಒಂದಾನುವೇಳೆ ದಾಖಲೆಯಲ್ಲಿ ಬರೆದಿರುವ ವಿಷಯವು ಬೇರೆ ಭಾಷೆಯಲ್ಲಿ ಅಂದರೆ ನನಗೆ ತಿಳಿಯದ

ಭಾಷೆಯಲ್ಲಿ ಇದ್ದರೆ ಅದನ್ನು ನಾನು ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ಆರೋಪಿತನು ಇಂಜಿನಿಯರಿಂಗ್ ಓದಿರುತ್ತಾನೆ. ನಾನು ಮತ್ತು ನನ್ನ ಗಂಡ ವೈದ್ಯರು ಎಂದರೆ ಸರಿ. ನನ್ನ ಮಾವ ಚಾ.ಸಾ.5 ರವರು ನಿವೃತ್ತ ಗುಮಾಸ್ತರಾಗಿರುತ್ತಾರೆ ಎಂದರೆ ಸರಿ. ನನ್ನ ಗಂಡನ ಕುಟುಂಬ ಒಳ್ಳೆ ವಿದ್ಯಾವಂತ ಕುಟುಂಬ ಎಂದರೆ ಸರಿ. ಆರೋಪಿತನು ಮಾನಸಿಕವಾಗಿ ಆರೋಗ್ಯವಂತನಾಗಿದ್ದಾನೆ ಎಂದರೆ ಸರಿ. ನಾನು ಆರೋಪಿ ಪರ ಪಾಟೀಸವಾಲಿನಲ್ಲಿ ಆರೋಪಿತನಿಗೆ ಸಹಾಯ ಮಾಡುವ ದೃಷ್ಟಿಯಿಂದ ಆತ ನನಗೆ ಮತ್ತು ನನ್ನ ಗಂಡನಿಗೆ ಯಾವುದೇ ತೊಂದರೆ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು ನಾನೇ ತಯಾರಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.2 ರ ಸಂಗತಿಯು ನನಗೆ ತಿಳಿದಿದ್ದು, ಆ ಸಮಯದಲ್ಲಿ ನಾನೇ ಮು.ಮಾ.1 ರಿಂದ 4 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲದೇ ನ್ಯಾಯಾಧೀಶರ ಎದುರು ನನ್ನ ಸ್ವಇಚ್ಛೆಯ ಪ್ರಕಾರ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನನಗೆ ಭಾವನಾದ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2026.01.08 14:34:31 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.